ಈ ದಿನ ನ್ಯಾಯಾಲಯದಲ್ಲಿ 1 & 4 ನೇ ಆರೋಪಿತರು ಗೈರು ಹಾಜರಾಗಿದ್ದು, ಆರೋಪಿತರ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ದಿನಾಂಕ 26-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲು: ಆರೋಪಿ ಪರ ವಕೀಲರಿಂದ:-**

6. ಗಲಾಟೆಯಾದ ದಿನಾಂಕ ನನಗೆ ನೆನಪಿಲ್ಲ. ವರ್ಷ ಹೇಳಲು ಆಗುವುದಿಲ್ಲ, ಆದರೆ 2-3 ವರ್ಷಗಳ ಹಿಂದೆ ಎನ್ನುತ್ತಾರೆ. ಗಲಾಟೆ ತವರು ಮನೆಯಲ್ಲಿ ಆಗಿತ್ತು. ಆಸ್ತಿ ಪಾಲಕರ ಹೆಸರಿನಲ್ಲಿದೆ. ಗಲಾಟೆ ನಡೆದಾಗ ಆಸ್ತಿ ತಾಯಿಯ ಹೆಸರಿನಲ್ಲಿತ್ತು. ಜಗಳ 9 ಗಂಟೆಗೆ ಆಗಿತ್ತು. 1 ಗಂಟೆಯ ಕಾಲ ಜಗಳ ಆಗಿತ್ತು. ಆ ಮನೆಯ ಸುತ್ತಮುತ್ತ ಮನೆಗಳಿವೆ. ಎಷ್ಟು ಮನೆಗಳಿವೆ ಎಂದರೆ ಸಾಕ್ಷಿಯು ನಾನು ಎಣಿಸಿಲ್ಲ ಎನ್ನುತ್ತಾರೆ. ಜಗಳವು ಮನೆಯ ಒಳಗಡೆ ಆಗಿಲ್ಲ, ಓಣಿಯಲ್ಲಿ ಆಗಿತ್ತು. ಜಗಳ ಬಿಡಿಸಲು ಯಾರೂ ಬರಲಿಲ್ಲ. ನೀವು ಹೇಳಿದಂತೆ ಯಾವುದೇ ಜಗಳ ಆಗಿಲ್ಲ, ಆದ್ದರಿಂದ ಯಾರೂ ಬಿಡಿಸಲು ಬಂದಿಲ್ಲ ಎಂದರೆ ಸರಿಯಲ್ಲ. ಘಟನೆ ನಡೆದ ದಿನ ನಾನು ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆ. ವೈದ್ಯರು ಸೂಜಿ ಮಾಡಿ ಮಾತ್ರೆ ಕೊಟ್ಟಿದ್ದರು. ನಾನು ವೈದ್ಯರಿಗೆ ನಡೆದ ಘಟನೆಯ ಬಗ್ಗೆ ಹೇಳಿದ್ದೆ.

7. ನಾನು ದೂರನ್ನು 2-3 ದಿನ ಬಿಟ್ಟು ಕೊಟ್ಟಿದ್ದೆ. ನನಗೆ ಭಯವಾಗಿದ್ದರಿಂದ 2-3 ದಿನ ತಡವಾಗಿ ದೂರು ಕೊಟ್ಟಿದ್ದೆ.

8. ಖಾರವನ್ನು ಕಣ್ಣಿಗೆ 2 & 3 ನೇ ಆರೋಪಿತರು ಎರಚಿದ್ದರು. ಕಣ್ಣನ್ನು ವೈದ್ಯರಿಗೆ ತೋರಿಸಿದ್ದೆ. ಖಾರ ಎರಚಿಲ್ಲ ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತಂಗಿ ಆಸ್ತಿ ಮಾಡಿಸಿಕೊಂಡ ಬಗ್ಗೆ ದಾಖಲೆಯನ್ನು ಪೋಲೀಸರಿಗೆ ಕೊಟ್ಟಿದ್ದೇನೆ. ದೂರನ್ನು ನಾನೇ ಕೊಟ್ಟಿದ್ದೇನೆ. ಆ ದಾಖಲೆಗಳು ಯಾವುವು ಎಂದರೆ ಸಾಕ್ಷಿಯು ಪಹಣಿ & 1 ಎಕರೆಯ ದಾಖಲೆ ಕೊಟ್ಟಿದ್ದೇನೆ. ಮನೆಗೆ ಸಂಬಂಧಿಸಿದ ದಾಖಲೆಯನ್ನು ಪೋಲೀಸರಿಗೆ ಕೊಟ್ಟಿದ್ದೇನೆ. ನೀವು ಯಾವುದೇ ದಾಖಲೆಯನ್ನು ಕೊಟ್ಟಿಲ್ಲ, ಸುಳ್ಳು ಕೇಸು ಹಾಕಿದ್ದೀರಿ ಎಂದರೆ ಸರಿಯಲ್ಲ. ದೂರು ಕೊಟ್ಟ ನಂತರ ಪೋಲೀಸರಿಗೆ ಠಾಣೆಯಲ್ಲಿ ಹೇಳಿಕೆ ಕೊಟ್ಟಿದ್ದೇನೆ. ಯಾವ ದಿನಾಂಕ ಎಂದು ನನಗೆ ಗೊತ್ತಿಲ್ಲ. ಅವರು ನನಗೆ ಹೊಡೆದ ಮರುದಿನವೇ ಪೋಲೀಸರು ಹೇಳಿಕೆ ಪಡೆದಿದ್ದರು.

9. ನನ್ನ ಸೀರೆ, ಕುಪ್ಪಸ ಹರಿದಿತ್ತು. ಅದನ್ನು ಪೋಲೀಸರಿಗೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ನಾನು ಅದನ್ನು ಉಟ್ಟು ಹೋಗಿದ್ದೆ, ಪೋಲೀಸರು ನೋಡಿದ್ದರು ಎಂದು ಹೇಳಿ, ನಂತರ

ಕೊಟ್ಟಿದ್ದೆ ಎನ್ನುತ್ತಾರೆ. ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದೂರು ಕೊಟ್ಟ 2-3 ದಿನಗಳ ನಂತರ ಘಟನಾ ಸ್ಥಳವನ್ನು ಪೋಲೀಸರಿಗೆ ತೋರಿಸಿದ್ದೆ. ಆಗ ಸಮಯ 12-1 ಗಂಟೆಯಾಗಿತ್ತು. ಪೋಲೀಸರು ಸ್ಥಳಕ್ಕೆ ಬಂದಿಲ್ಲ, ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಯಾವ ಚಪ್ಪಲಿಯಿಂದ ಹೊಡೆದಿದ್ದರು ಎಂದರೆ ಸಾಕ್ಷಿಯು ಕತ್ತಲೆಯಲ್ಲಿ ಹೇಗೆ ಗೊತ್ತಾಗುತ್ತದೆ ಎನ್ನುತ್ತಾರೆ. ಆರೋಪಿತರು ನಿಮಗೆ ಹೊಡೆ ಬಡೆ ಮಾಡಿಲ್ಲ, ಜೀವದ ಬೆದರಿಕೆ ಹಾಕಿಲ್ಲ, ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆಸ್ತಿಯ ಸಲುವಾಗಿ ಸುಳ್ಳು ದೂರು ಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರು ನಿಮ್ಮ ಮೇಲೆ ಸಿವಿಲ್ ದಾವೆ ಹಾಕಿದ್ದರಿಂದ, ಅವರ ಮೇಲೆ ಸುಳ್ಳು ಕೇಸು ಮಾಡಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿಂಧನೂರು.**